# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018

## ಸಂಸ್ಕೃತೋತ್ಸವ – 2022

**ದಿನಾಂಕ : 24.08.2022ರಿಂದ 25.08.2022ರವರೆಗೆ**

**ಸ್ಥಳ : ಶೃಂಗೇರಿ ಶಂಕರ ಮಠ, ಶಂಕರಪುರಂ, ಚಾಮರಾಜಪೇಟೆ, ಬೆಂಗಳೂರು**

ಸಂಸ್ಕೃತ ಭಾಷೆಯು ಭಾರತ ದೇಶದ ಸನಾತನ ಪರಂಪರೆಯ ಭದ್ರ ಬುನಾದಿ. ಸಂಸ್ಕೃತ ಭಾಷೆಯ ಸಾಹಿತ್ಯ ಶ್ರೀಮಂತಿಕೆಯು ಇತರ ಎಲ್ಲ ಭಾಷೆಗಳಲ್ಲೂ ಅನುಸ್ಯೂತವಾಗಿ ಹರಿದು ಬಂದಿದೆ. ಭಾರತೀಯ ಜ್ಞಾನಶಾಖೆಗಳು ಸಂಸ್ಕೃತವೆಂಬ ಬೇರಿನಿಂದ ಸಮೃದ್ಧವಾಗಿ ಬೆಳದು ನಿಂತಿವೆ. ಜ್ಞಾನಪರಂಪರೆಯ ಉಳಿವು ಮತ್ತು ವಿಸ್ತಾರ ಸಂಸ್ಕೃತದ ಅರಿವಿನಿಂದ ಅಧಿಕವಾಗುತ್ತದೆ. ಇಂತಹ ಪ್ರವೃದ್ಧ ಸುಸಂಸ್ಕೃತ ಭಾಷೆಯಾದ ಸಂಸ್ಕೃತದ ಹಾಗೂ ಶಾಸ್ತ್ರಪರಂಪರೆಯ ರಕ್ಷಣೆ, ಪೋಷಣೆ ಮತ್ತು ಅಭಿವೃದ್ಧಿಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹತ್ತು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.

ಶ್ರಾವಣ ಮಾಸವನ್ನು ಸಂಸ್ಕೃತ ಮಾಸವಾಗಿ ಆಚರಿಸುವುದು ಸರ್ವ ವಿದಿತ. ದೇಶದ ಎಲ್ಲೆಡೆ ಈ ಮಾಸದಲ್ಲಿ ಸಂಸ್ಕೃತೋತ್ಸವವನ್ನು ವೈಭವದಿಂದ ಆಚರಿಸಿ, ಸಂಸ್ಕೃತ ವಾಙ್ಮಯದ ಹಿರಿಮೆ ಗರಿಮೆಯನ್ನು ಪ್ರಶಂಸಿಸುತ್ತಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತೋತ್ಸವವನ್ನು ಇದೇ ಆಗಸ್ಟ್ ಮಾಹೆಯಲ್ಲಿ ಆಚರಿಸಲಿದೆ. ಜನಸಾಮಾನ್ಯರಲ್ಲಿ, ವಿದ್ಯಾರ್ಥಿಗಳಲ್ಲಿ ಸಂಸ್ಕೃತಾಸಕ್ತಿಯನ್ನು ಉತ್ತೇಜಿಸುವುದು ಈ ಕಾರ್ಯಕ್ರಮದ ಉದ್ದೇಶ. ವಿಶ್ವವಿದ್ಯಾಲಯದ ಸಂಸ್ಕೃತೋತ್ಸವ ಆಚರಣೆಗೆ ಬೆಂಗಳೂರಿನ ವಿವಿಧ ಸಂಸ್ಥೆಗಳು ಸಹಯೋಗ ನೀಡಲಿವೆ. ಈ ಎಲ್ಲ ಸಂಸ್ಥೆಗಳಿಗೆ ಹಾಗೂ ಸಂಸ್ಕೃತ ಪೋಷಕರಿಗೆ ವಿಶ್ವವಿದ್ಯಾಲಯವು ಆಭಾರಿಯಾಗಿದೆ. ವಿಶ್ವವಿದ್ಯಾಲಯವು ಇಂತಹ ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಲು ಸ್ವಾಗತಿಸುತ್ತದೆ.

ಸಂಸ್ಕೃತೋತ್ಸವದಲ್ಲಿ ಮಕ್ಕಳಿಗಾಗಿ ಮತ್ತು ಯುವಕರಿಗಾಗಿ ವಿವಿಧ ಸ್ತರಗಳಲ್ಲಿ ಸ್ಪರ್ಧೆಗಳನ್ನು, ಯುವ ವಿದ್ವಾಂಸರಿಗಾಗಿ ಶಾಸ್ತ್ರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ವಿವರ ಈ ಕೆಳಗಿನಂತಿದೆ. ಸಂಸ್ಕೃತ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ. ಭಾಗವಹಿಸಿದ ಎಲ್ಲ ಸ್ಪರ್ಧಾರ್ಥಿಗಳಿಗೂ ಪ್ರಮಾಣಪತ್ರ ನೀಡಲಾಗುವುದು. ಎಲ್ಲ ಸ್ಪರ್ಧೆಗಳಲ್ಲಿ ನಿರ್ಣಾಯಕರ ತೀರ್ಪು ಅಂತಿಮವಾಗಿರುತ್ತದೆ. ಬೆಂಗಳೂರು ವಲಯದ ವಿದ್ಯಾರ್ಥಿಗಳು ಮಾತ್ರ ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದೆ.

**ಸ್ಪರ್ಧೆಗಳಲ್ಲಿ ಭಾಗವಹಿಸಲು ಸಂಪರ್ಕಿಸಿ :**

ವಿದ್ವಾನ್ ವೇದೇಶ್ ನಾಗಸಂಪಿಗೆ : 8296492329, 6361995464,

ವಿದ್ವಾನ್ ಕಿಶೋರ್ : 9008922614

**ಸ್ಪರ್ಧೆಗಳಿಗೆ ಆವೇದನಾ ಪತ್ರದ ಲಿಂಕ್ :**

https://docs.google.com/forms/d/1GQJ-QlgxcLo_Ald0OV6riFsiT8LUbYtfj1O9ic8LdIA

## ಉದ್ಘಾಟನಾ ಕಾರ್ಯಕ್ರಮ :

**24.08.2022ರಂದು ಪ್ರಾತಃ 10 ಗಂಟೆಗೆ ಶೃಂಗೇರಿ ಶಂಕರ ಮಠ, ಶಂಕರಪುರಂ, ಬೆಂಗಳೂರಿನ ಸಂಭಾಗಣದಲ್ಲಿ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

### 1. ಸಂಸ್ಕೃತ ಗೀತಗಾಯನ ಸ್ಪರ್ಧೆ :

**ದಿನಾಂಕ : 24–08–2022 ಬೆಳಿಗ್ಗೆ**

ಸಂಸ್ಕೃತ ಗೀತಗಾಯನ ಸ್ಪರ್ಧೆಯನ್ನು 24.08.2022ರಂದು ಬೆಳಿಗ್ಗೆ ಆಯೋಜಿಸಿಲಾಗಿದೆ. **ಸ್ಪರ್ಧೆಯು ಮೂರು ಸ್ತರಗಳಲ್ಲಿ ನಡೆಯುತ್ತದೆ – ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಕಾಲೇಜು** – ಈ ಸ್ಪರ್ಧೆಯಲ್ಲಿ ಸಂಸ್ಕೃತ ಭಾರತೀ ಪ್ರಕಾಶನದ ಗೀತ ಸಂಸ್ಕೃತಂ ಅಥವಾ ಗೇಯ ಸಂಸ್ಕೃತಂ ಪುಸ್ತಕದಿಂದ ಆಯ್ದ ಹಾಡುಗಳನ್ನು ಮಾತ್ರ ಪ್ರಸ್ತುತಿ ಪಡಿಸಬಹುದಾಗಿದೆ. ಶ್ರುತಿ ಪೆಟ್ಟಿಗೆಯ ಹೊರತಾಗಿ ಇನ್ನಾವುದೇ ವಿಧದ ವಾದ್ಯಗಳನ್ನು ಬಳಸುವಂತಿಲ್ಲ.

**ಸಂಯೋಜಕರು : ಡಾ. ಲಕ್ಷ್ಮಿ ವೆಲುವರತಿ, ವಿದುಷೀ ಸಾವಿತ್ರೀ ಪೂಜಾರಿ.**

### 2. ಸಂಸ್ಕೃತಕಥಾಕಥನ ಸ್ಪರ್ಧೆ :

**ದಿನಾಂಕ : 24–08–2022 ಬೆಳಿಗ್ಗೆ**

ಸಂಸ್ಕೃತಕಥಾಕಥನ ಸ್ಪರ್ಧೆಯನ್ನು ದಿನಾಂಕ : 24.08.2022ರಂದು ಬೆಳಿಗ್ಗೆ ಆಯೋಜಿಸಿಲಾಗಿದೆ. ಯಾವುದಾದರೂ ಸಂಸ್ಕೃತ ಕಥೆಯನ್ನು 4–5 ನಿಮಿಷಗಳಲ್ಲಿ ನಿರರ್ಗಳವಾಗಿ (ಅಭಿನಯಪೂರ್ವಕವಾಗಿಯೂ) ಪ್ರಸ್ತುತಿ ಪಡಿಸುವುದು. ಈ ಸ್ಪರ್ಧೆಯಲ್ಲಿ 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಮಾತ್ರ ಭಾಗವಹಿಸಬಹುದಾಗಿದೆ.

**ಸಂಯೋಜಕರು : ಡಾ.ಶರತ್ ಚಂದ್ರ ಸ್ವಾಮಿ, ಡಾ. ಅನುಪಮಾ ವಿ., ಡಾ. ಭೀಮಾ ನಾಯ್ಕ, ಡಾ. ತೇಜಸ್ವಿನಿ ಜೆ.**

### 3. ಭಗವದ್ಗೀತಾ ಕಂಠಪಾಠ ಸ್ಪರ್ಧೆ :

**ದಿನಾಂಕ : 24–08–2022 ಬೆಳಿಗ್ಗೆ**

ಭಗವದ್ಗೀತಾ ಕಂಠಪಾಠ ಸ್ಪರ್ಧೆಯನ್ನು ದಿನಾಂಕ : 24.08.2022ರಂದು ಬೆಳಿಗ್ಗೆ ಹಮ್ಮಿಕೊಳ್ಳಲಾಗಿದೆ. **ಪ್ರಾಥಮಿಕ ಶಾಲೆ ಮತು ಪ್ರೌಢಶಾಲೆಯಲ್ಲಿಯೇ ಮೂರು ಸ್ತರಗಳಲ್ಲಿ ಸ್ಪರ್ಧೆಯು ನಡೆಯುತ್ತದೆ** – ಈ ಸ್ಪರ್ಧೆಯಲ್ಲಿ 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ 15ನೇ ಅಧ್ಯಾಯದ 1–10 ಶ್ಲೋಕ ಕಂಠಪಾಠ, 6ರಿಂದ 8ನೆಯ ತರಗತಿಯ ವಿದ್ಯಾರ್ಥಿಗಳಿಗೆ 15ನೇ ಅಧ್ಯಾಯದ 1–15 ಶ್ಲೋಕ ಕಂಠಪಾಠ, 9 ಮತ್ತು 10ನೆಯ ತರಗತಿಯ ವಿದ್ಯಾರ್ಥಿಗಳಿಗೆ 15ನೇ ಅಧ್ಯಾಯದ 20 ಶ್ಲೋಕ ಕಂಠಪಾಠ ಮಾಡಬೇಕಿರುತ್ತದೆ.

**ಸಂಯೋಜಕರು : 9–10ಕ್ಕೆ – ಡಾ. ರೇಖಾ ದೇವಿ, ಡಾ. ಪ್ರಭುಸ್ವಾಮಿ,**
**6–8ಕ್ಕೆ – ಡಾ. ಅರ್ಚನಾ ಕಾರಂತ, ವಿದುಷೀ ವಿಜಯಲಕ್ಷ್ಮಿ**
**1–5 ಕ್ಕೆ – ವಿದ್ವಾನ್ ರಾಜಶೇಖರ ಕೆ.ಕೆ, ವಿದುಷೀ ಕಾಂತಾಮಣಿ**

### 4. ಭಾಷಣ ಸ್ಪರ್ಧೆ :

**ದಿನಾಂಕ : 24–08–2022 ಮಧ್ಯಾಹ್ನ**

ಸಂಸ್ಕೃತ ಭಾಷಣ ಸ್ಪರ್ಧೆಯನ್ನು ದಿನಾಂಕ : 24.08.2022ರಂದು ಮಧ್ಯಾಹ್ನ ಆಯೋಜಿಸಿಲಾಗಿದೆ. 'ನೂತನ ಶಿಕ್ಷಣ ನೀತಿ', 'ಭಾರತೀಯ ಸ್ವತಂತ್ರತಾ', 'ರಾಷ್ಟ್ರನಿರ್ಮಾತಾ ಬಾಬಾಸಾಹೇಬ ಅಂಬೇಡ್ಕರ್', 'ಸಂಸ್ಕೃತೇ ವಿಜ್ಞಾನಮ್' ಎಂಬ ನಾಲ್ಕು ವಿಷಯಗಳಲ್ಲಿ ಒಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. **ಈ ಸ್ಪರ್ಧೆಯು ಪ್ರೌಢಶಾಲೆ ಮತ್ತು ಕಾಲೇಜು ಎಂಬ ಎರಡು ಸ್ತರಗಳಲ್ಲಿ ಸ್ಪರ್ಧೆಯು ನಡೆಯುತ್ತದೆ.**

**ಸಂಯೋಜಕರು : ಡಾ. ತೇಜಸ್ವಿನಿ ಬಿದರಿ, ಡಾ. ವನರಾಜ ಕೆ.**

## 5. ಚಿತ್ರಕಲಾಸ್ಪರ್ಧೆ :

**ದಿನಾಂಕ : 24.08.2022ರಂದು ಪೂರ್ವಾಹ್ನ**

ಸಂಸ್ಕೃತ ಕಾವ್ಯವಾಚನ ಸ್ಪರ್ಧೆಯನ್ನು ದಿನಾಂಕ : 24.08.2022ರಂದು ಪೂರ್ವಾಹ್ನ ಆಯೋಜಿಸಿಲಾಗಿದೆ. ಸಂಸ್ಕೃತ ಸಾಹಿತ್ಯದ ಯಾವುದೇ ವಿಷಯವನ್ನು ಈ ಸ್ಪರ್ಧೆಯಲ್ಲಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಈ ಸ್ಪರ್ಧೆಯು **ಪ್ರೌಢಶಾಲೆ ಮತ್ತು ಕಾಲೇಜು ಎಂಬ ಎರಡು ಸ್ತರಗಳಲ್ಲಿ ಸ್ಪರ್ಧೆಯು ನಡೆಯುತ್ತದೆ.**

**ಸಂಯೋಜಕರು : ಕಾಲೇಜು :ಡಾ. ವಿನಾಯಕ ನಾಮಣ್ಣವರ್, ವಿದುಷೀ ಜ್ಯೋತಿ ಹೆಚ್.ಪಿ,**

**ಪ್ರೌಢಶಾಲೆ : ಡಾ. ಜಯರೇವಣ್ಣ, ವಿದ್ವಾನ್ ವಾಲ್ಮೀಕಿ ರಾಮ್**

## 6. ರಸಪ್ರಶ್ನೆ ಸ್ಪರ್ಧೆ :

**ದಿನಾಂಕ : 25.08.2022ರಂದು ಬೆಳಿಗ್ಗೆ**

ರಸಪ್ರಶ್ನೆ ಸ್ಪರ್ಧೆಯನ್ನು ದಿನಾಂಕ : 25.08.2022ರಂದು ಬೆಳಿಗ್ಗೆ ಆಯೋಜಿಸಿಲಾಗಿದೆ. ಈ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಪಿ.ಯು.ಸಿ ಮತ್ತು ಸ್ನಾತಕ (ಪದವಿ)ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರತಿ ಶಾಲೆ/ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳ ಎರಡು ವೃಂದಕ್ಕೆ ಮಾತ್ರ ಅವಕಾಶವಿರುತ್ತದೆ. ಸಂಸ್ಕೃತ ಸಾಹಿತ್ಯ ಮತ್ತು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಇರುತ್ತದೆ.

**ಸಂಯೋಜಕರು : ಡಾ. ಶ್ರೀವೆಂಕಟನಾಥನ್, ಡಾ. ತಿಮ್ಮಣ್ಣ ಆರ್, ಡಾ. ಶ್ರುತಿ ಎಚ್.ಕೆ. ವಿದ್ವಾನ್ ನಾರಾಯಣ ಸ್ವಾಮಿ, ಡಾ. ಮಲ್ಲನ ಗೌಡ ಎಸ್.**

## 7. ಯುವಶಾಸ್ತ್ರಾರ್ಥಸಭೆ :

**ದಿನಾಂಕ : 25.08.2022ರಂದು ಪೂರ್ವಾಹ್ನ**

ದಿನಾಂಕ : 25.08.2022ರಂದು ಪೂರ್ವಾಹ್ನ ಶಾಸ್ತ್ರಗೋಷ್ಠಿಯನ್ನು ಆಯೋಜಿಸಿಲಾಗಿದೆ. ಯುವವಿದ್ವಾಂಸರು ಮತ್ತು ಚಿಂತಕರು ಈ ಸಭೆಯಲ್ಲಿ ಭಾಗವಹಿಸಿ ಅನೇಕ ಶಾಸ್ತ್ರಗಳಲ್ಲಿ ವಾಕ್ಯಾರ್ಥವನ್ನು ನಡೆಸುವರು. ಜಿಜ್ಞಾಸುಗಳು, ಶಾಸ್ತ್ರ ಪ್ರೇಮಿಗಳು ಈ ವಾಕ್ಯಾರ್ಥ ಸಭೆಯಲ್ಲಿ ಭಾಗವಹಿಸಬಹುದಾಗಿದೆ. **ವಿಷಯ : ಶಬ್ದವೃತ್ತಿ.** ಈ ಸಭೆಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳು, ಎಂ.ಫಿಲ್, ಪಿಎಚ್.ಡಿ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.

**ಸಂಯೋಜಕರು : ಡಾ. ಋಷಿದೇವ್ ಭಾರ್ಗವ, ಡಾ. ಭಾಸ್ಕರ ಭಟ್ ಜೋಶಿ, ಡಾ. ಕೃಷ್ಣ ಜೋಶಿ**

## 8. ಸಂಸ್ಕೃತ ಕಾವ್ಯವಾಚನ :

**ದಿನಾಂಕ : 25.08.2022ರಂದು ಮಧ್ಯಾಹ್ನ**

ಸಂಸ್ಕೃತ ಕಾವ್ಯವಾಚನ ಸ್ಪರ್ಧೆಯನ್ನು ದಿನಾಂಕ : 25.08.2022ರಂದು ಮಧ್ಯಾಹ್ನ ಆಯೋಜಿಸಿಲಾಗಿದೆ. ಸಂಸ್ಕೃತ ಸಾಹಿತ್ಯದ ಯಾವುದೇ ಕಾವ್ಯಪ್ರಕಾರದಲ್ಲಿ 5 ಶ್ಲೋಕಗಳನ್ನು ಆಯ್ಕೆ ಮಾಡಿಕೊಂಡು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. **ಈ ಸ್ಪರ್ಧೆಯು ಪ್ರೌಢಶಾಲೆ ಮತ್ತು ಕಾಲೇಜು ಎಂಬ ಎರಡು ಸ್ತರಗಳಲ್ಲಿ ಸ್ಪರ್ಧೆಯು ನಡೆಯುತ್ತದೆ.**

**ಸಂಯೋಜಕರು : ಡಾ. ವಿ.ಹೆಚ್. ಮೂರ್ತಿ, ಡಾ. ಶಕುಂತಲಾ ಭಟ್**

# ಸಂಸ್ಕೃತೋತ್ಸವದ ಸಮಾರೋಪ ಕಾರ್ಯಕ್ರಮ

**ದಿನಾಂಕ : 25.08.2022**ರಂದು ಸಾಯಂಕಾಲ 5 ಗಂಟೆಗೆ ಸಂಸ್ಕೃತೋತ್ಸವದ ಸಮಾರೋಪ ಕಾರ್ಯಕ್ರಮವನ್ನು ಚಾಮರಾಜಪೇಟೆ ವ್ಯಾಪ್ತಿಯ ಶಂಕರಪುರಂನ ಶಂಕರ ಮಠದಲ್ಲಿ ಆಯೋಜಿಸಿಲಾಗಿದೆ. ಎಲ್ಲ ಸಂಸ್ಕೃತಾನುರಾಗಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದಾಗಿದೆ. ಈ ಕಾರ್ಯಕ್ರಮದಲ್ಲಿ ವಿಜೇತರಿಗೆ ಪ್ರಮಾಣಪತ್ರವನ್ನು ನೀಡಲಾಗುವುದು.

**ಸಂಯೋಜಕರು :** ಡಾ.ವಿನಯ ಪಿ, ಡಾ. ರಾಮಕೃಷ್ಣ ಭಟ್, ಡಾ ಕೆ.ಇ.ಶ್ರೀ ವೇಂಕಟನಾಥನ್, ಡಾ. ತಿಮ್ಮಣ್ಣ ಆರ್, ಡಾ. ಶ್ರುತಿ ಎಚ್.ಕೆ, ಡಾ.ಶಕುಂತಲಾ ಭಟ್, ಡಾ.ಗಿರೀಶ್ ಭಟ್, ವಿದ್ವಾನ್ ಜಗನ್ನಾಥ ಪೂಜಾರ್

ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಸಹಯೋಗ ಸಂಸ್ಥೆಗಳು ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ, ಯಶಸ್ವಿಯಾಗಿಸುವಂತೆ ಎಲ್ಲ ಸಂಸ್ಕೃತಾನುರಾಗಿಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತವೆ.

ಪ್ರೊ. ವಿ.ಗಿರೀಶ್‌ಚಂದ್ರ
ಕುಲಸಚಿವರು

## ಸಹಯೋಗ ನೀಡಲಿರುವ ಸಂಸ್ಥೆಗಳು

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಸಂಸ್ಕೃತ ಭಾರತೀ, ಸುರಸರಸ್ವತೀಸಭಾ, ಕರ್ನಾಟಕ ರಾಜ್ಯಪ್ರೌಢಶಾಲಾ ಸಂಸ್ಕೃತಾಧ್ಯಾಪಕಸಂಘ, ವಿದ್ಯಾಧೀಶ ಸ್ನಾತಕೋತ್ತರ ಸಂಶೋಧನಕೇಂದ್ರ, ದ್ವೈತವೇದಾಂತ–ಅಧ್ಯಯನ ಸಂಶೋಧನ ಪ್ರತಿಷ್ಠಾನ, ಮೈತ್ರೀಸಂಸ್ಕೃತಪ್ರತಿಷ್ಠಾನ, ಆದರ್ಶಸಂಸ್ಕೃತಮಹಾವಿದ್ಯಾಲಯ, ಗೀತಗೋವಿಂದ ಸಂಸ್ಕೃತಸಂಘ, ರಸಧ್ವನಿಕಲಾಕೇಂದ್ರ, ಭಾರತೀಯ ವಿದ್ವತ್ಪರಿಷತ್, ಕೇಂದ್ರೀಯವಿದ್ಯಾಲಯ ಸಂಸ್ಕೃತಾಧ್ಯಾಪಕಗಣ, ವ್ಯೋಮ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಷನ್, ಸುರಭಾರತೀಸಂಸ್ಕೃತಸಂಸ್ಕೃತಿಪ್ರತಿಷ್ಠಾನ, ಪೂರ್ಣಪ್ರಜ್ಞ ವಿದ್ಯಾಪೀಠ, ವೇದವಿಜ್ಞಾನಗುರುಕುಲ, ಮಹಾಬೋಧಿ ಸೊಸೈಟಿ, ಪ್ರಜ್ಞಾವರ್ಧಿನೀಟ್ರಸ್ಟ್, ಸಮ್ಯಕ್ ಪ್ರತಿಷ್ಠಾನ, ಶುಭಂಕರೋತಿ–ಮೈತ್ರೇಯೀಗುರುಕುಲ

ಪೂರ್ಣಪ್ರಮತಿ, ಪರಿಪೂರ್ಣ ಕಲಿಕಾ ತಾಣ, ಬೆಂಗಳೂರು

ಸದಾಶಿವ ಭಾರತೀ ಸಂಸ್ಕೃತ ಪಾಠಶಾಲೆ, ಬೆಂಗಳೂರು

ಮಹಾವಿದ್ಯಾಲಯ ಸಂಸ್ಕೃತ ಪ್ರಾಧ್ಯಾಪಕರ ಸಂಘ, ಬೆಂಗಳೂರು